ಆ) ಹಾಗಿದ್ದಲ್ಲಿ ಈ ಕಾಮಗಾರಿ ಕೆಲಸದ ನಿರ್ವಹಣೆಯನ್ನು ಈಗಾಗಲೇ ಗುತ್ತಿಗೆದಾರರಿಗೆ ನೀಡಲಾಗಿರುವುದು ನಿಜವೇ.

ಇ) ಹಾಗಿದ್ದಲ್ಲಿ ಈ ಬಡಾವಣೆಗಳಲ್ಲಿನ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :-

ಅ) ಇಲ್ಲ, ಈ ಯೋಜನೆಗೆ ಆಡಳಿತ ಮಂಜೂರಾತಿಯ ಮೇ 90ರಲ್ಲಿಯೇ ನೀಡಿದೆ.

ಆ) ಹೌದು.

ಇ) ಸದರಿ ಬಡಾವಣೆಗಳಿಗೆ ಸಧ್ಯಕ್ಕೆ ಭಾಗಶಃ ಕಾವೇರಿ ನದಿ ಹಾಗೂ ಭಾಗಶಃ ಕೊಳವೆ ಬಾವಿಗಳಿಂದ ನೀರನ್ನು ಒದಗಿಸಲಾಗುತ್ತಿದೆ. ಸಮಸ್ಯೆ ಬಗೆಹರಿಸಲು ಕೃಷ್ಣರಾಜೇಂದ್ರ ವೃತ್ತದಿಂದ ಟೌನ್‌ಹಾಲ್ ತನಕ ಕೊಳವೆಯನ್ನು ಅಳವಡಿಸುವ ಕಾಮಗಾರಿ ಕೈಗೊಳ್ಳಲಾಗಿದೆ.

ವಿಷಯ :- ಮೈಸೂರಿನ ವಾಣಿವಿಲಾಸ ನೀರು ಸಂಗ್ರಹಾಲಯದಲ್ಲಿ ಮತ್ತೊಂದು ಸಂಪು ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2371 (2972)

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ್) :- ಮಾನ್ಯ ನಗರಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ನೀರು ತುಂಬಿಡುವ ಸಂಪು ಮತ್ತೊಂದನ್ನು ವಾಣಿ ವಿಲಾಸ ನೀರು ಸಂಗ್ರಹಾಲಯದಲ್ಲಿ ನಿರ್ಮಿಸಿಲಾಗಿದೆಯೇ?

ಆ) ಹಾಗಿದ್ದಲ್ಲಿ ನೀರು ತುಂಬುವ ಸಂಪು ಸ್ಥಂಪೂರ್ಣವಾಗಿ ಜನರಿಗೆ ಯಾವಾಗ ಉಪಯೋಗಕ್ಕೆ ಬರುವುದು.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :-

ಅ) ಹೌದು

ಆ) 1996ರ ಜೂನ್ ವೇಳೆಗೆ ಉಪಯೋಗಕ್ಕೆ ಬರುವುದು.

ವಿಷಯ :- ಕುಂದಾಪುರ ತಾಲ್ಲೂಕಿನಲ್ಲಿ ಶಿಲೆ ಮತ್ತು ಕೆಂಪುಕಲ್ಲು ಹಾಗೂ ಮರಳಿಗೆ ಪಡೆದ ಪರವಾನಿಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2372 (2716)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?